ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,
ಪೊನ್ನಂಪೇಟೆ.

**ಸಿ.ಸಿ. ನಂ. 333/2021** ಫ್ರಾ.ಸಾ –5
ಚಾ.ಸಾ – 7

ದಿನಾಂಕಃ **06.01.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಎನ್ ಪ್ರಭಾಕರ್ |
| ತಂದೆಯ ಹೆಸರು | : | ಲೇಟ್ ಎಂ. ನರಸಿಂಹಯ್ಯ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಹಿರಿಯ ಮೋಟಾರ್ ನಿರೀಕ್ಷಕರು ಪ್ರಾದೇಶಿಕ ಸಾರಿಗೆ ಕಚೇರಿ |
| ವಾಸ ಸ್ಥಳ | : | ಕೊಪ್ಪಳ |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ನಾನು ಜುಲೈ 2019 ರಿಂದ ಮೇ 2021 ರ ತನಕ ಪ್ರಾದೇಶಿಕ ಸಾರಿಗೆ ಕಚೇರಿ ಮಡಿಕೇರಿಯಲ್ಲಿ ಹಿರಿಯ ಮೋಟಾರ್ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 14.09.2020 ರಲ್ಲಿ ಕುಟ್ಟ ಪೊಲೀಸ್ ನಿರೀಕ್ಷಕರು ನೀಡಿದ ಮನವಿ ಪತ್ರದ ಮೇರೆಗೆ ಅದೇ ದಿನ ಸಂಜೆ 05.00 ಗಂಟೆ ಕುಟ್ಟ ಠಾಣಾ ಪೊಲೀಸ್ ಆವರಣದಲ್ಲಿ ನಿಲುಗಡೆ ಮಾಡಿದ್ದ ಕೆ.ಎ.01.ಎಹೆಚ್.3407 ಹೆವಿ ಗೂಡ್ಸ್ ಅಶೋಕ ಕಂಪನಿಯ ವಾಹನವನ್ನು ತಪಾಸಣೆ ಮಾಡಿದಾಗ ಈ ಕೆಳಕಂಡ ಹಾನಿ ಉಂಟಾಗಿರುವುದು ಕಂಡು ಬಂದಿರುತ್ತದೆ.

1) Front bumper head light windscreen gals damaged

2) Front right side body damaged

3) Both quarter glass damaged

4) Rear view mirror damaged

5) Right side rear body dented and damaged.

**C.C. No. 333/2021** **PW - 5**

ಸದರಿ ವಾಹನ ನಿಂತಿ ಸ್ಥಿತಿಯಲ್ಲಿ ಬ್ರೇಕ್ ಸಿಸ್ಟಮ್ ಸುಸ್ಥಿತಿಯಲ್ಲಿತ್ತು. ಸದರಿ ಅಪಘಾತವು ಈ ವಾಹನದ ಯಾಂತ್ರಿಕ ದೋಷದಿಂದ ಕಂಡು ಬಂದಿರುವುದಿಲ್ಲ. ಈ ಬಗ್ಗೆ ವರದಿ ನೀಡಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 17 ಎಂದು ಸಹಿಯನ್ನು ನಿ ಪಿ 17(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಜೆ. ಎಸ್. ಎಸ್ ವಕೀಲರಿಂದಃ

ಅಪಘಾತ ಸ್ಥಳವನ್ನು ನಾನು ನೋಡಿರುವುದಿಲ್ಲ. ವಾಹನವು ಚಲಾಯಿಸುವ ಸ್ಥಿತಿಯಲ್ಲಿ ಇರಲಿಲ್ಲ, ಆದ್ದರಿಂದ ಚಾಲನೆ ಮಾಡಿ ಪರೀಕ್ಷಿಸಿರುವುದಿಲ್ಲ, ಆದರೆ ಬ್ರೇಕ್‌ಗಳು ಸುಸ್ಥಿತಿಯಲ್ಲಿತ್ತು. ಚಕ್ರಗಳಲ್ಲಿ ಗಾಳಿ ಇತ್ತು. ಚಾಲಕನು ಜಾಗ್ರತೆ ವಹಿಸಿದರೂ ಈ ಪ್ರಮಾಣ ಗಾಡಿ ಚಲಾಯಿಸುವಾಗ ಮತ್ತು ಅದರಲ್ಲಿ ಬಾರಿ ಪ್ರಮಾಣ ಸರಕುಗಳು ಇದ್ದಿದ್ದರಿಂದ ಇಂತಹ ಘಟನೆಗಳು ಆಗುವ ಸಂಭವವಿದ್ದು ಆ ಕಾರಣಕ್ಕೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಮೇಲೆ ಸಾಕ್ಷ್ಯದಲ್ಲಿ ಹೇಳಿದಂತೆ ಸ್ಥಳಕ್ಕೆ ಹೋಗಿ ಗಾಡಿಯನ್ನು ಪರಿಶೀಲಿಸಿಲ್ಲ, ಆದ್ದರಿಂದ ತಪ್ಪು ವರದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ